CC No.1156/2021
CW-6 PW-3

**ಹೆಚ್ಚುವರಿ ವ್ಯವಹಾರ  ನ್ಯಾಯಾಧೀಶರು ಮತ್ತು ಪ್ರ. ದ. ನ್ಯಾ. ದಂ. ನ್ಯಾಯಾಲಯ,  ಸೊರಬ**

**ಸಿ ಸಿ ನಂ.  1156/2021**

| | | |
|---|---|---|
| **ಹೆಸರು** | : | **ಉಮೇಶಪ್ಪ** |
| **ತಂದೆಯ ಹೆಸರು** | : | **ಮಲ್ಲೇಶಪ್ಪ** |
| **ವಯಸ್ಸು** | : | **61 ವರ್ಷ** |
| **ಉದ್ಯೋಗ** | : | **ವ್ಯವಸಾಯ** |
| **ಸ್ಥಳ** | : | **ಚಿಕ್ಕ ಇಡಗೋಡು ಗ್ರಾಮ, ಸೊರಬ** |

**ದಿನಾಂಕಃ 12.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಈಗ 04 ವರ್ಷ ಗಳಿಂದ ನಾನು ಮನೆಯಲ್ಲಿದ್ದಾಗ ಚಾಸ.5 ರವರು ನಮ್ಮ ಮನೆಗೆ ಬಂದಿರುತ್ತಾರೆ. ನಾನು ಚಾಸ.5 ರವರ ಜೊತೆ ಮಾತನಾಡುತ್ತಾ ಮನೆ ಒಳಗೆ ಕುಳಿತಿದ್ದೆ. ಶಬ್ದ ಕೇಳಿ ಮನೆ ಹೊರಗೆ ಬಂದಾಗ ನನ್ನ ಮಗ ಮತ್ತು ಮೃತ  ವಿಶ್ವನಿಗೆ ಅಪಘಾತ ಆಗಿರುವುದು ಕಂಡು ಬಂತು. ಅಪಘಾತ ಹೇಗೆ ಆಗಿರುತ್ತದೆ ಎಂದರೆ ಸಾಕ್ಷಿ ಕ್ಯಾಂಟರ್ ಡಿಕ್ಕಿ ಹೊಡೆಯಿತು ಎಂದಿರುತ್ತಾರೆ. ಕ್ಯಾಂಟರ್ ಅನ್ನು ಯಾರು ಡಿಕ್ಕಿ ಹೊಡೆಸಿದರು ಎಂದರೆ ನನಗೆ ಗೊತ್ತಿಲ್ಲ. ಅಪಘಾತ ದಲ್ಲಿ ನನ್ನ ಮಗನಿಗೆ ಪೆಟ್ಟು ಬಿದಿತ್ತು. ವಿಶ್ವನಿಗೆ ತುಂಬಾ ಪೆಟ್ಟಾಗಿತ್ತು.  ನಂತರ ನನ್ನ ಮಗನನ್ನು ವಿಶ್ವನನಲ್ನು ಆನವಟ್ಟಿ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಕರೆದುಕೊಂಡು ಹೋಗಿರುತೇವೆ. ಆಸ್ಪತ್ರೆಯಲ್ಲಿ ರಾತ್ರಿ.9.00 ಗಂಟೆಗೆ ವಿಶ್ವ ಮರಣ ಹೊಂದಿರುತ್ತಾನೆ ಎಂದು ತಿಳಿದಿರುತ್ತದೆ .  ಅಪಘಾತ ಪಡಿಸಿದ ಕ್ಯಾಂಟರ್ ಮತ್ತು ಅದರ ಚಾಲಕನನ್ನು  ನೋಡಿದರೆ ಗುರುತಿಸುತ್ತೀರಾ ಎಂದರೆ ಸಾಕ್ಷಿ ನಾನು ಕ್ಯಾಂಟರ್

ಅನ್ನು ಮತ್ತು ಚಾಲಕನನ್ನು ನೋಡಿರುವುದಿಲ್ಲ ಎಂದಿರುತ್ತಾರೆ. ಈ ಬಗ್ಗೆ ನೀವು ಪೋಲಿಸರ ಪೋಲಿಸರ ಮುಂದೆ ಹೇಳಿಕೆ ಮತ್ತು ಮರುಹೇಳಿಕೆ ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದಿರುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಎ ಪಿ ಪಿಯವರು ಕೋರಿರುತ್ತಾರೆ, ಅನುಮತಿಸಲಾಯಿತು).**

**<u>ಪಾಟಿ ಸವಾಲುಃ ಮಾನ್ಯ ಸ.ಸ.ಅಭಿಯೋಜಕವರಿಂದಃ</u>**

ನನ್ನ ಮಗ ಮತ್ತು ವಿಶ್ವ ರಸ್ತೆಯಲ್ಲಿ ಬೈಕ್ ನಿಲ್ಲಿಸಿಕೊಂಡು ಮಾತನಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಚಾಸ.4 ಮತ್ತು 5 ರವರು ತಮ್ಮ ಸಂಬಂಧಪಟ್ಟ ರಾಯಲ್ ಎನ್ಫೀಲ್ಡ್ ಬೈಕನ್ನು ತೆಗೆದುಕೊಂಡು ಬಂದು ನಮ್ಮ ಮಗನ ಜೊತೆ ಮಾತನಾಡುತ್ತಿದ್ದರು ಎಂದರೆ ಸಾಕ್ಷಿ ಮನೆ ಒಳಗೆ ಮಾತನಾಡುತ್ತಿದ್ದೇವು ಎನ್ನುತ್ತಾರೆ. ಕ್ಯಾಂಟರ್ ವಾಹನದ ಚಾಲಕ ಅತಿವೇಗ ಮತ್ತು ಅಜಾಗುರಾಕತೆಯಿಂದ ವಾಹನವನ್ನು ಒಡಿಸಿಕೊಂಡು ಬಂದು ನನ್ನ ಮಗ ಮತ್ತು ವಿಶ್ವನಿಗೆ ಡಿಕ್ಕಿ ಪಡಿಸಿರುತ್ತಾನೆ ಎಂದರೆ ಸಾಕ್ಷಿ ನಾನು ನೋಡಿರುವುದಿಲ್ಲ ಎನ್ನುತ್ತಾರೆ. ಅಪಘಾತ ಪಡಿಸಿದ ಕ್ಯಾಂಟರ್ ನಂ.ಕೆಎ 19 ಸಿ 0090 ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ . ಕ್ಯಾಂಟರ್ ವಾಹನದ ಚಾಲಕನ ಹೆಸರು ನಾಗರಾಜ ಬಿನ್ ಮಾಲತೇಶಪ್ಪ, ವಾಸ. ಶಕುನವಳ್ಳಿ ಗ್ರಾಮ ಎಂದು ನನಗೆ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ವಿಶ್ವ ಮರಣ ಹೊಂದಲು ಕ್ಯಾಂಟರ್ ಚಾಲಕನ ಅತಿ ವೇಗ ಮತ್ತು ಅಜಾಗೂರಕತೆಯೇ ಕಾರಣ

ಎಂದರೆ ಸರಿ. ನಾನು ಪೋಲಿಸರ ಮುಂದೆ ಹೇಳಿಕೆ ಮತ್ತು ಮರುಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿ.

**ಪಾಟಿ ಸವಾಲುಃ  ಆರೋಪಿ ಪರ ಶ್ರಿ. ಎನ್.ಎಂ ವಕೀಲರಿಂದ .**

ಪೋಲಿಸರು ನನ್ನನ್ನು ವಿಚಾರಣೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ದೃಷ್ಟಿಯಿಂದ ನಾನು ಚಾಸ.1 ಸುಳ್ಳು ದೂರು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

**(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಕಂಪ್ಯೂಟರೀಕರಿಸಲಾಯ್ತು).**

**ಓ.ಹೇ.ಕೇ. ಸರಿ ಇದೆ ಎಂದು ಒಪ್ಪಿದ್ದಾರೆ.**

**C/C ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಸೊರಬ.**